


# ‘ಆಧಾರ್ ಪಿವಿಸಿ’ಗೆ ಆನ್‌ಲೈನ್ ಅರ್ಜಿ

**ನುಣುಪು ಕಾಗದ ರೂಪದ ಆಧಾರ್ ಕಾರ್ಡ್‌ಗಳ ಬಾಳಿಕೆ ಕಡಿಮೆ. ಹಾಗಾಗಿ ಬ್ಯಾಂಕ್‌ಗಳ ಎಟಿಎಂ ಕಾರ್ಡ್ ರೂಪದ ‘ಪಿವಿಸಿ’ ಕಾರ್ಡ್‌ಗಳನ್ನು ಆಸಕ್ತರಿಗೆ ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ. ಐವತ್ತು ರೂಪಾಯಿ ಶುಲ್ಕ ಸಲ್ಲಿಸಿ ಯಾರು ಬೇಕಾದರೂ ‘ಪಿವಿಸಿ’ ಕಾರ್ಡ್‌ಗಳನ್ನು ಪಡೆಯಬಹುದು.**

■ **ಶಶಿಕುಮಾರ್ ಸಿ.**

ಇತ್ತೀಚಿನವರೆಗೂ ಆಧಾರ್ ಕಾರ್ಡ್ ಅನ್ನು ಅಧಿಕೃತವಾಗಿ ಕಾಗದ ರೂಪದಲ್ಲಷ್ಟೇ ಕೇಂದ್ರ ಸರ್ಕಾರ ಮುದ್ರಿಸಿ ಸಾರ್ವಜನಿಕರಿಗೆ ನೀಡುತ್ತಿತ್ತು. ಅದರ ಜೊತೆಗೆ ಡಿಜಿಟಲ್ ರೂಪದಲ್ಲೂ (ಇಆಧಾರ್) ಒದಗಿಸುತ್ತಿತ್ತು. ಈ ಸಾಲಿಗೆ ಈಗ ‘ಪಿವಿಸಿ ಕಾರ್ಡ್’ ರೂಪದ ಆಧಾರ್ ಕಾರ್ಡ್ ಹೊಸತಾಗಿ ಸೇರ್ಪಡೆಗೊಂಡಿದೆ.

ಆಧಾರ್ ಕಾರ್ಡ್ (Aadhaar Unique Identification Authority of India – UIDAI) ಪ್ರತಿ ಹಂತದಲ್ಲೂ ಅಗತ್ಯವಿರುವ ಬಹುಮುಖ್ಯ ದಾಖಲೆ. ಇದಿಲ್ಲದೆ, ಯಾವುದೇ ಸರ್ಕಾರಿ ಯೋಜನೆಯ ಲಾಭ ಪಡೆಯಲು ಸಾಧ್ಯವಾಗದು. ಸಮಯಕ್ಕನುಗುಣವಾಗಿ ಆಧಾರ್ ಕಾರ್ಡ್‌ನಲ್ಲೂ ಅನೇಕ ಬದಲಾವಣೆಗಳಾಗಿವೆ. ಆ ಪೈಕಿ ಹೊಸ ಬದಲಾವಣೆಯೇ ಆಧಾರ್ ಪಿವಿಸಿ ಕಾರ್ಡ್. ಈ ರೀತಿಯ ಕಾರ್ಡ್‌ಗಳನ್ನು ಈ ಮುಂಚೆ ಖಾಸಗಿ ಸಂಸ್ಥೆಗಳು ಮಾಡಿಕೊಡುತ್ತಿದ್ದವು. ಖಾಸಗಿಯವರ ಮಧ್ಯಪ್ರವೇಶದಿಂದ ಆಧಾರ್ ಕಾರ್ಡ್ ದುರ್ಬಳಕೆಯ ಕುರಿತು ದೂರುಗಳು ಕೇಳಿಬಂದವು. ಆ ದೂರುಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವೇ ಅಧಿಕೃತವಾಗಿ ಪಿವಿಸಿ ಕಾರ್ಡ್‌ಗಳನ್ನು ರೂಪಿಸತೊಡಗಿದೆ.

ಈ ಆಧಾರ್ ಕಾರ್ಡ್ ವಾಹನ ಚಾಲನಾ ಪರವಾನಗಿ (ಡಿಎಲ್), ವಾಹನಗಳ ನೋಂದಣಿ ದಾಖಲಾತಿ (ಆರ್‌ಸಿ ಕಾರ್ಡ್) ಎಟಿಎಂ ಕಾರ್ಡ್ ರೂಪದ್ದು. ಎಟಿಎಂ ಕಾರ್ಡ್‌ನಲ್ಲಿರುವಂತೆ ಯಾವುದೇ ರೀತಿಯ ಚಿಪ್ ಇದರಲ್ಲಿ ಇರುವುದಿಲ್ಲ. ಪ್ಲಾಸ್ಟಿಕ್‌ನಿಂದ ರೂಪುಗೊಳ್ಳುವ ಈ ಕಾರ್ಡ್ ದೀರ್ಘ ಕಾಲದವರೆಗೆ ಬಾಳಿಕೆ ಬರುತ್ತದೆ. ಸದ್ಯದ ನುಣುಪು ಕಾಗದ ರೂಪದ ಆಧಾರ್ ಕಾರ್ಡ್‌ಗಳಂತೆ ಬೇಗ ಹಾಳಾಗದು, ಸುಕ್ಕಾಗದು. ಜೇಬಿನಲ್ಲಿ ಇಟ್ಟುಕೊಳ್ಳಬಹುದು ಎನ್ನುವುದು ಈ ಪ್ಲಾಸ್ಟಿಕ್ ಕಾರ್ಡ್‌ಗಳ ಮತ್ತೊಂದು ಉಪಯೋಗ.

## ಅರ್ಜಿ ಸಲ್ಲಿಕೆ ಹೇಗೆ?

- ಮೊದಲು UIDAI ವೆಬ್‌ಸೈಟ್ uidai.gov.in ಅಥವಾ resident.uidai.gov.in ಜಾಲತಾಣಕ್ಕೆ ಭೇಟಿ ನೀಡಿ.
- ವೆಬ್‌ಸೈಟ್‌ನ ಮೇಲ್ಭಾಗದ ಪಟ್ಟಿಯಲ್ಲಿನ ‘ಮೈ ಆಧಾರ್’ ನಮೂದಿನಲ್ಲಿನ ‘ಆರ್ಡರ್ ಆಧಾರ್ ಪಿವಿಸಿ ಕಾರ್ಡ್’ ಆಯ್ಕೆಯನ್ನು ಕ್ಲಿಕ್ಕಿಸಿ. ಆಗ ಪಿವಿಸಿ ಆಧಾರ್ ಕಾರ್ಡ್‌ಗಾಗಿ ಬೇಡಿಕೆ ಸಲ್ಲಿಸುವ ಅರ್ಜಿ ನಮೂನೆ ತೆರೆದುಕೊಳ್ಳುತ್ತದೆ.
- ಬಳಿಕ ಅರ್ಜಿದಾರರು ತಮ್ಮ ಆಧಾರ್ ಕಾರ್ಡ್ ಸಂಖ್ಯೆ, ವರ್ಚುವಲ್ ಐಡಿ ಸಂಖ್ಯೆ ಅಥವಾ ನೋಂದಣಿ ಸಂಖ್ಯೆಯನ್ನು ವೆಬ್‌ಸೈಟ್‌ನಲ್ಲಿ ನಮೂದಿಸಬೇಕು.
- ತಮ್ಮ ಮೊಬೈಲ್ ಸಂಖ್ಯೆ ನಮೂದಿಸಿ ‘ಒಟಿಪಿ’ ಪಡೆದು ಲಾಗಿನ್ ಆಗಬೇಕು
- ಪಿವಿಸಿ ಆಧಾರ್ ಕಾರ್ಡ್ ವಿಭಾಗಕ್ಕೆ ಹೋಗಿ ನಿಗದಿತ ಶುಲ್ಕ (50) ಪಾವತಿಸಬೇಕು.

## ಮೊಬೈಲ್ ನೋಂದಣಿ ಇಲ್ಲದಿದ್ದರೆ?

ಜನರು ತಮ್ಮ ಮೊಬೈಲ್ ಸಂಖ್ಯೆಯನ್ನು ಆಧಾರ್ ಸಂಖ್ಯೆಗೆ ಲಿಂಕ್ ಮಾಡದಿದ್ದರೂ ಆಧಾರ್ ಪಿವಿಸಿ ಕಾರ್ಡ್‌ಗೆ ಅರ್ಜಿ ಸಲ್ಲಿಸಬಹುದು. ಅದಕ್ಕಾಗಿ ಬೇರೆ ರೀತಿಯಾಗಿ ಅರ್ಜಿ ಸಲ್ಲಿಸಬೇಕು.

ಬಳಕೆದಾರರು https://residentpvc.uidai.gov.in/order pvcreprint ವೆಬ್‌ಸೈಟ್‌ಗೆ ಭೇಟಿ ನೀಡಿ.

- ನಿಮ್ಮ ಆಧಾರ್ ಕಾರ್ಡ್ ಸಂಖ್ಯೆಯನ್ನು ನೋಂದಾಯಿಸಿ.
- ಸೆಕ್ಯುರಿಟಿ ಕೋಡ್ ಅನ್ನು ಭರ್ತಿ ಮಾಡಿ ಮತ್ತು my mobile not registered ಆಯ್ಕೆಯ ಮೇಲೆ ಕ್ಲಿಕ್ ಮಾಡಿ.
- ಆ ಕ್ಷಣಕ್ಕೆ ನೀವು ನೋಡಬಹುದಾದ ಮೊಬೈಲ್ ಸಂಖ್ಯೆಯನ್ನು ದಾಖಲಿಸಿ. ಆ ನಂಬರ್‌ಗೆ ಬರುವ ‘ಒಟಿಪಿ’ ಸಂಖ್ಯೆಯನ್ನು ನಮೂದಿಸಿ.
- 50 ರೂಪಾಯಿ ಶುಲ್ಕವನ್ನು ಪಾವತಿಸಿದರೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣ.

ಅರ್ಜಿ ಸಲ್ಲಿಸಿದ ಎರಡು ವಾರಗಳಲ್ಲಿ ಆಧಾರ್ ಪಿವಿಸಿ ಕಾರ್ಡ್ ನಿಮ್ಮ ನೋಂದಾಯಿತ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಲಾಗುತ್ತದೆ. ■